

ಕಚ್ಚಿ ನಿದ್ರಿಸಲು ಬಿಡದ ಇವುಗಳು, ತಿಗಣೆ –ಸೊಳ್ಳೆಗಳಂತೆ ರಕ್ತ ಹೀರಿ, ಕಾಯಿಲೆ ಹರಡದಿದ್ದರೂ ತಮ್ಮ ವಿಭಿನ್ನ ಸ್ವರೂಪದ ಉಪಟಳಗಳಿಂದ ಮಾನವಕುಲವನ್ನು ಕಾಡುವ ಕೀಟ ಶತ್ರುಗಳ ಪಟ್ಟಿಗೆ ನಿರ್ವಿವಾದವಾಗಿ ಸೇರುತ್ತವೆ. ಕೆಲವು ಬಾರಿ ಗೋಡೆಗೆ ತೂಗುಹಾಕಿದ ಪ್ಯಾಂಟು ಶರ್ಟುಗಳ ಒಳಗೂ ಪ್ರವೇಶಿಸಿ ಆಫೀಸಿನಲ್ಲಿ ಕುಳಿತಾಗ ಒಳಗೆಲ್ಲೋ ಕಡಿದು ಎಲ್ಲರೆದುರಿಗೆ ಎಲ್ಲೆಲ್ಲೋ ಕೈ ಹಾಕುವಂತೆ ಮಾಡಿ ಇರಿಸುಮುರಿಸಿಗೆ ಕಾರಣವಾಗುವ ಸಂದರ್ಭಗಳೂ ಇರುತ್ತವೆ. ಕಿರು ಬೆರಳಿನಲ್ಲಿ ಹೊಸಕಿ ಹಾಕಬಹುದಾದ ಜೀವಿಯೊಂದು ಆನೆಗಾತ್ರದ ವ್ಯಕ್ತಿಗಳನ್ನೂ ತಡಬಡಾಯಿಸುವಂತೆ ಮಾಡಿಬಿಡುತ್ತದೆ!

ಮೊನ್ನೆ ನನ್ನ ಶ್ರೀಮತಿಯ ಇರುವೆ ಮೇಲಿನ ಕೋಪ ನನ್ನ ಮೇಲೆ ತಿರುಗಿತ್ತು! ತುಪ್ಪದ ಪಾತ್ರೆ ಒಳಗಿಳಿದು ತೇಲಾಡುತ್ತಿದ್ದ ಇವುಗಳನ್ನು ತೆಗೆಯಲು ಶ್ರೀಮತಿ ಒದ್ದಾಡುತ್ತಿದ್ದಾಗ ನಾನು ಇರುವೆಗಳ ಶಿಸ್ತು, ಸಂಘ ಜೀವನವನ್ನು ಹೊಗಳಿದೆ. ಆಗ ಇನ್ನಷ್ಟು ಸಿಟ್ಟಾದ ಶ್ರೀಮತಿ, 'ಪಾಕಿಸ್ತಾನದ ಅಧ್ಯಕ್ಷರು ಭಯೋತ್ಪಾದಕರಿಗೆ ಪ್ರೋತ್ಸಾಹ ಕೊಟ್ಟ ಹಾಗೆ ನೀವು ಇರುವೆಗಳ ಪರ ವಹಿಸುತ್ತಿದ್ದೀರಿ' ಎಂದು ಅಡುಗೆಮನೆಯ ಪ್ಲ್ಯಾಟ್‌ಫಾರ್ಮ್ ಅನ್ನು ಭಾರತ ಪಾಕಿಸ್ತಾನದ 'ಎಲ್‌ಓಸಿ'ಗೆ ಹೋಲಿಸಿ ನನ್ನ ಮೇಲೆ ಎಗರಾಡಿದಳು! 'ಮೊನ್ನೆ ಸಕ್ಕರೆ ಡಬ್ಬಕ್ಕೆ, ನಿನ್ನೆ ಪುಟ್ಟಿಗೆ ಇಷ್ಟಾಂತ ಮಾಡಿಟ್ಟ ಶಾವಿಗೆ ಪಾಯಸಕ್ಕೆ, ಇವತ್ತು ತಿನ್ನುವ ಅನ್ನಕ್ಕೆ, ನಿಮ್ಮ ವೀಟ್ ಬ್ರೆಡ್ಡಿಗೆ, ಅಷ್ಟೇ ಯಾಕೆ? ಇತ್ತೀಚೆಗೆ ನಿಮ್ಮ ಪ್ರಿಂಟರ್ ಒಳಗೂ ಗೂಡು ಕಟ್ಟಿ ಅದರ ವೈರುಗಳನ್ನೇ ತಿಂದು ಮುಕ್ಕಿರಲಿಲ್ವಾ ಈ ಇರುವೆಗಳು? ಇವನ್ನ ಮನೆಯಿಂದ ಹೇಗೆ ಹೊರಗೆ ಹಾಕೋದು ಅಂತ ನಾನು ತಲೆಕೆಡಿಸಿಕೊಳ್ಳುತ್ತಾ ಇದ್ದರೆ ನೀವು ಶಿಸ್ತು–ಸಂಘಾಂತ ಪ್ರಶಸ್ತಿ ಬೇರೆ ಕೊಡ್ತಾ ಇದ್ದೀರಲ್ಲ?' ಎಂದು ಅವಳು ನುಡಿದಾಗ, ಸಾಧಾರಣವಾಗಿ ಯಾವುದಕ್ಕೂ ಅಂಜದ ನನ್ನ ಶ್ರೀಮತಿ ಪುಟಾಣಿ ಇರುವೆಗಳ ಮುಂದೆ ತೀರಾ ಅಸಹಾಯಕಳಾಗಿ ಕಂಡಳು!.

'ಈಗಷ್ಟೇ ಕಾಯಿಸಿಟ್ಟ ಹಾಲಿಗೂ ನುಗ್ಗಾವೆ, ಡೀಪ್ ಫ್ರೀಜರ್ ಒಳಗಿರುವ ವಸ್ತುಗಳ ಮೇಲೂ ದಾಳಿ ಮಾಡ್ತಾವೆ. ಅದು ಹ್ಯಾಗೆ ಎಲ್ಲದನ್ನು ತಡೆದುಕೊಳ್ಳೋ ಶಕ್ತಿ ಬೆಳೆಸಿಕೊಂಡಿದ್ದಾವೋ ಏನ್ ಕಥೇನೋ? ಪಕ್ಕದ ಮನೆ ಜಾನಕಮ್ಮನವರ ಹತ್ತಿರ ನಮ್ಮನೇನಲ್ಲಿ ಇರುವೆಗಳೇ ಇಲ್ಲ ಅಂತ ಹೇಳಿಕೊಂಡಿದ್ದೆ. ಮೊನ್ನೆ ಅವರು ಬಂದಾಗ ಕಾಫಿ ಕೊಡೋಣ ಅಂತ ಹೋದರೆ ಈ ದರಿದ್ರದವು ಹಾಲಿನ ಪಾತ್ರೆಗೆ ಮುತ್ತಿಗೆ ಹಾಕಿದಾವೆ! ಕೆಲವಂತೂ ಸ್ವಿಮ್ಮಿಂಗ್ ಪೂಲ್‌ನಲ್ಲಿ ಈಜು ಹೊಡೆಯೋ ಹಾಗೆ ಪಾತ್ರೆಯ ಒಳಗಿಳಿದು ಹಾಲಲ್ಲಿ ಮುಳುಗೇಳುತ್ತಿದ್ದಾವೆ! ಅದನ್ನು ನೋಡಿದ ಜಾನಕಮ್ಮ, 'ಇದೇನ್ರೀ... ನಿಮ್ಮನೇನಲ್ಲಿ ಒಂದೂ ಇರುವೆ ಇಲ್ಲ ಅಂತ ಹೇಳಿದ್ರಿ?' ಅಂತ ಕೇಳಿದ್ದು, ಇರುವೆ ಕಡಿತಕ್ಕಿಂತ ಜಾಸ್ತಿ ಉರಿಯೋ ಹಾಗೆ ಮಾಡ್ತು' ಎಂದು ಶ್ರೀಮತಿ ಇರುವೆಗಳ ಮೇಲೆ ಅವಳಿಗಿರುವ ಕೋಪವನ್ನು ಇಮ್ಮಡಿಗೊಳಿಸಿದ ಘಟನೆಯನ್ನು ನಿವೇದಿಸಿದಳು.

ಇರುವೆಗಳು ಜಿರಲೆಗಳ ಹಾಗೆಯೇ ಎಷ್ಟೋ ಕೋಟಿ ವರ್ಷಗಳಿಂದ ವಿಕಾಸದ ಹತ್ತು ಹಲವು ಮಜಲುಗಳನ್ನು ಯಶಸ್ವಿಯಾಗಿ ದಾಟಿ ಬಂದಿವೆಯಾದ್ದರಿಂದ ಅವುಗಳ ನಿರ್ನಾಮ ಅಸಾಧ್ಯ. ಅವು ನಿರುಪದ್ರವಿಗಳಾಗಿದ್ದರೆ ಸಹಜೀವನ ನಡೆಸಬಹುದಿತ್ತು. ಆದರೆ ತೊಂದರೆ ತಾಪತ್ರಯ ತಂದೊಡ್ಡಿ ಕೆಲವೊಮ್ಮೆ ಅನವಶ್ಯಕವಾಗಿ ಕಚ್ಚಿ ಸಿಟ್ಟೆಬ್ಬಿಸುತ್ತವೆ. ಬರೀ ಆಹಾರ ಪದಾರ್ಥಗಳಷ್ಟೇ ಏಕೆ, ಎಲೆಕ್ಟ್ರಿಕ್ ವೈರುಗಳನ್ನೂ ಕತ್ತರಿಸಿಬಿಡುತ್ತವೆ. ಕಂಪ್ಯೂಟರ್ ಲ್ಯಾಪ್‌ಟಾಪ್‌ಗಳಂತಹ ಎಲೆಕ್ಟ್ರಾನಿಕ್ ವಸ್ತುಗಳ ಒಳಕ್ಕಿಳಿದು ಗೂಡು ಕಟ್ಟಿ ಅವುಗಳನ್ನು ಹಾಳುಮಾಡುತ್ತವೆ. ಆಫ್ರಿಕಾದ ಕಾಡುಗಳಲ್ಲಿ ಮುತ್ತಿಗೆ ಹಾಕಿದ ಕೆಲವು ಗಂಟೆಗಳ ಒಳಗೆ ಅಸ್ಥಿಪಂಜರವಾಗಿಸಿ ಬಿಡುವ ಭಯಾನಕ ಸೈನಿಕ ಇರುವೆ, ಅಂದರೆ 'ಆರ್ಮಿ ಆಂಟ್'ಗಳಿದ್ದಾವಂತೆ! ಹಾಗೆಯೇ ಮೈಮೇಲೆ ಏರಿದರೂ ಕಚ್ಚದೆ ಬರೀ ಕಚಗುಳಿ ಇಡುವ 'ಗಾಳಿ ಇರುವೆ'ಗಳೂ ಇವೆ.

ವಿಶಿಷ್ಟ ಬಗೆಯ ಗೂಡು ಕಟ್ಟಿ ವಾಸಿಸುವ, ವಿಟಮಿನ್ ಸಿ ಯುಕ್ತವಾದ ಕೆಂಜಿರುವೆ ಅಥವಾ ಚಗಳಿ ಇರುವೆ ಮಲೆನಾಡ ಭಾಗದ ಕೆಲವರಿಗೆ ಬಹಳ ಪ್ರಿಯವಾದ ಖಾದ್ಯ! ಆದರೆ, ಸಾಧಾರಣವಾಗಿ ಮನೆಗಳಲ್ಲಿ ಸಕ್ಕರೆ ಬೆಲ್ಲ, ಚಕ್ಲಿ, ಕೋಡುಬಳೆ, ಹೀಗೆ ಎಲ್ಲದಕ್ಕೂ ದಾಳಿ ಮಾಡುವವೆಂದರೆ ಶಿಸ್ತಿನ ಸಿಪಾಯಿಗಳಂತೆ ಸಾಲಿನಲ್ಲಿಯೇ ಬರುವ ಮಧ್ಯಮಗಾತ್ರದ ಇರುವೆಗಳೇ! ಇವು ಸಾಲಿನಲ್ಲಿ ತಪ್ಪಿ ಆಚೆ ಈಚೆ ಹೋಗದಂತೆ ಕಾಯಲು ದೊಡ್ಡ ಗಾತ್ರದ 'ಮಾನಿಟರ್' ಇರುವೆಗಳು ಮಧ್ಯದಲ್ಲಿರುತ್ತವೆ. ಮುಂದಿರುವ ವಸ್ತು, ಅಪಾಯಗಳ ಬಗ್ಗೆ ಮಾಹಿತಿ ಒದಗಿಸುವ ಬೇಹುಗಾರ ಇರುವೆಗಳೂ ಆಚೀಚೆ ಓಡಾಡುತ್ತಾ, ಸಂವಹನ ಮಾಡುತ್ತಾ, ತಮ್ಮ ದಾಳಿಯನ್ನು ಸಮನ್ವಯ ಮಾಡುತ್ತಿರುತ್ತವೆ. ಈ ಬಗೆಯ ಸಂಯೋಜಿತ ದಾಳಿಯೇ ನಮ್ಮ ಗೃಹ ಸಚಿವರ ಕೈಕಾಲು ಬಿಡಿಸೋದು! ಆಗವರು ಲಕ್ಷ್ಮಣರೇಖೆಯಂಥಾ ರಾಸಾಯನಿಕ ಅಸ್ತ್ರಗಳ ಮೊರೆಹೋಗುತ್ತಾರೆ. ಆದರೆ ಅವುಗಳ ಪ್ರಭಾವಕ್ಕೂ ಬಗ್ಗದ ಗುಣಗಳನ್ನು ಎಂದಿಗೂ ವಿನಾಶವಾಗಲಿಬ್ಬಿಸದ, ಈ ಇರುವೆಗಳು ಬೆಳೆಸಿಕೊಳ್ಳುತ್ತಲೇ ಇರುವುದು ಪ್ರಕೃತಿಯ ನಿಯಮ.

ಒಂದು ಅಂಕಿ ಅಂಶದ ಪ್ರಕಾರ, ಪ್ರಪಂಚದಲ್ಲಿರುವ ಇರುವೆಗಳ ಸಂಖ್ಯೆ 20 ಕ್ವಾಡ್ರಿಲಿಯನ್‌ನಷ್ಟು. ಅಂದರೆ, ಎರಡರ ಮುಂದೆ ಹದಿನೈದು ಸೊನ್ನೆಗಳನ್ನು ಹಾಕಬೇಕು ಅಷ್ಟು! ಪ್ರಪಂಚದಲ್ಲಿರುವ ಪ್ರತಿಯೊಬ್ಬ ಮನುಷ್ಯನಿಗೂ 2.5 ಮಿಲಿಯನ್ ಅನುಪಾತದಲ್ಲಿ ಇರುವೆಗಳಿವೆಯಂತೆ! ಅಂದಮೇಲೆ, ಅವನ್ನು ಕೊಂದು ಮುಗಿಸುವುದು ಮನುಷ್ಯನಿಗೆ ಖಂಡಿತ ಅಸಾಧ್ಯ!

ಎಂದೆಂದಿಗೂ ಎಲ್ಲೆಲ್ಲಿಯೂ ಇರುವ ಈ ಇರುವೆಗಳ ದಾಳಿಯ ತಡೆಗೆ, ನಾನು ಶ್ರೀಮತಿಗೆ ನೀಡಿದ ಸಲಹೆ ಎಂದರೆ, ಅವುಗಳ ಜೊತೆಗೆ ಕದನ ವಿರಾಮ ಹಾಗೂ ಅವುಗಳು ಬರದಂತೆ ಮುನ್ನೆಚ್ಚರಿಕೆ ವಹಿಸುವ **prevention is better than cure** ಎಂಬ ಸೂತ್ರದ ಬಳಕೆ.

ಪ್ರತಿಕ್ರಿಯಿಸಿ: **feedback@sudha.co.in**

